ದಿನಾಂಕ 27-02-2020 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿ ಪರ ಶ್ರೀ ಎಂ.ಕೆ ವಕೀಲರಿಂದಃ</u>

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ವಿಚಾರಗಳು ನನಗೆ ಗೊತ್ತು. ಪ್ರಮಾಣ ಪತ್ರ ತಯಾರಿಸಲು ನಾನೇ ಮಾಹಿತಿ ನೀಡಿರುತ್ತೇನೆ . ಈ ದಾವೆಯನ್ನು ಕೃಷ್ಣ ರಾವ್ ರವರು ನಾರಾಯಣ, ಸೀತು, ಸೌಮ್ಯರವರ ಮೇಲೆ ಸಲ್ಲಿಸಿರುತ್ತಾರೆ. ಕೃಷ್ಣ ರಾವ್ ರವರು ಸಲ್ಲಿಸಿರುವ ದಾವೆಯ ಸರ್ವೆ ನಂಬರ್ ನನಗೆ ನೆನಪಿಲ್ಲ. ದಾವಾ ಎ ಸ್ವತ್ತುಗಳು ಪೂರ್ವ ದಿಕ್ಕಿಗೆ ಬರುತ್ತವೆ ಮತ್ತು ಆ ಸ್ವತ್ತಿನಲ್ಲಿರುವ ಖುಮ್ಕಿ ಆಸ್ತಿ ಪಶ್ಚಿಮ ದಿಕ್ಕಿಗೆ ಬರುತ್ತವೆ. 2 ನೇ ವಾದಿಯ ಮನೆಯಿಂದ ನನ್ನ ಮನೆ ಸುಮಾರು 125 ಮೀ ದೂರ ಇದೆ. ನನ್ನ ಮನೆಯಲ್ಲಿ ನಾನು, ನನ್ನ ಹೆಂಡತಿ, ಮಗಳು ಹಾಗೂ ನನ್ನ ತಂದೆ ತಾಯಿಗಳು ಇದ್ದೇವೆ. ನಾನು 2 ನೇ ವಾದಿಯ ಜೊತೆ ಕೆಲಸಕ್ಕೆ ಹೋಗುವುದಿಲ್ಲ. ನಾನು ಈ ಹಿಂದೆಯೂ ಸಹ ಹೋಗುತ್ತಿರಲಿಲ್ಲ.

ಈ ಪ್ರತಿವಾದಿಗಳಾದ ನಾರಾಯಣ ಮತ್ತು ಸೌಮ್ಯರವರು ನನ್ನ ಮೇಲೆ ಒಂದು ಕ್ರಿಮಿನಲ್ ಕೇಸು ದಾಖಲಿಸಿರುತ್ತಾರೆ. ಆ ಪ್ರಕರಣದಲ್ಲಿ ನಾನು ಸೌಮ್ಯರವರ ಕೈಯನ್ನು ತಿರುಚಿರುತ್ತೇನೆ ಎಂದು ನನ್ನ ಮೇಲೆ ಕೇಸು ದಾಖಲಿಸಿರುತ್ತಾರೆ. ಸಾಕ್ಷಿಯು ಮುಂದುವರಿದು ನನ್ನ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಆ ಸದರಿ ಪ್ರಕರಣದಲ್ಲಿ 2 ನೇ ವಾದಿಯು ಕೂಡ ಆರೋಪಿಗಳ ಪೈಕಿ ಒಬ್ಬರಾಗಿರುತ್ತಾರೆ. ಪ್ರತಿವಾದಿಗಳು ವಾದಿಗಳ ದಾವಾ ಸ್ವತ್ತಿಗೆ 4.8.2015 ರಂದು ಸಂಜೆ ಸುಮಾರು 6 ಗಂಟೆಗೆ ಬಂದು ತೊಂದರೆ ಕೊಟ್ಟಿರುತ್ತಾರೆ. ಪ್ರತಿವಾದಿಗಳು ಪುನಃ 17.8.2015 ರಂದು ಹಗಲು ಹೊತ್ತಿನಲ್ಲಿ ಬಂದು ತೊಂದರೆ ಕೊಟ್ಟಿರುತ್ತಾರೆ. ಆಗ ಸುಮಾರು 11 ಗಂಟೆಯಾಗಿರಬಹುದು. ನನಗೆ ಸಾಕ್ಷಿ ಹೇಳುವಂತೆ 2 ನೇ ವಾದಿ ಹೇಳಿರುತ್ತಾರೆ. ನಾನು 2 ನೇ ವಾದಿ ಹೇಳಿದಂತೆ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳ ಬಗ್ಗೆ ನನಗೆ ಅಷ್ಟೇನು ಮಾಹಿತಿ ಇಲ್ಲ**.** ಆದ್ದರಿಂದ **2** ನೇ ವಾದಿ ಹೇಳಿಕೊಟ್ಟಂತೆ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ**.** ದಾವಾ ಸ್ವತ್ತುಗಳು ವಾದಿಗಳಿಗೆ ಅವರ ತಂದೆಯ ಮುಖಾಂತರ ಬಂದಿರುತ್ತದೆ**.** ಪ್ರತಿವಾದಿ **1** ರಿಂದ **3** ರವರು ಸರ್ಕಾರಿ ಜಾಗದ ಸುಮಾರು **2** ಎಕ್ರೆ ವಿಸ್ತೀರ್ಣದಲ್ಲಿ ಸ್ವಾಧೀನಲ್ಲಿದ್ದಾರೆ ಎಂದರೆ ಸರಿಯಲ್ಲ**.** ಅದರಲ್ಲಿ ರಬ್ಬರ್ ಕೃಷಿ ಮಾಡಿಸಿದ್ದಾರೆ ಎಂದರೆ ಕೃಷ್ಣರಾವ್ ರವರೇ ಮಾಡಿಸಿರುತ್ತಾರೆ**.** ವಾದಿಗಳ ಜಮೀನಿನ ಪಕ್ಕದಲ್ಲಿ **1** ರಿಂದ **3** ನೇ ಪ್ರತಿವಾದಿಗಳಿಗೆ ಸೇರಿದ ಮನೆ ಇದೆ**.** ಆ ಮನೆ ಸುಮಾರು **30** ವರ್ಷದಿಂದ ಇದೆ**.** ಆ ಮನೆಯನ್ನು **1** ರಿಂದ **3** ನೇ ಪ್ರತಿವಾದಿಗಳು **94** ಸಿ ರಡಿಯಲ್ಲಿ ಅರ್ಜಿ ಸಲ್ಲಿಸಿ ಮಂಜೂರು

OS 376/15
PW2

ಮಾಡಬೇಕೆಂದು ಕೇಳಿರುವ ವಿಚಾರ ನನಗೆ ಗೊತ್ತಿಲ್ಲ. **1** ರಿಂದ **3** ನೇ ಪ್ರತಿವಾದಿಗಳು ಈಗ ಸ್ವಾಧೀನದಲ್ಲಿರುವ ಆಸ್ತಿಗೆ ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಮಂಜೂರು ಮಾಡಿಸಿಕೊಳ್ಳಲು ಅರ್ಜಿ ಸಲ್ಲಿರುವ ವಿಚಾರ ನನಗೆ ಗೊತ್ತಿಲ್ಲ. ನಾನು ದಿಃ **4.8.2015** ರಂದು ಜನರ ಬೊಬ್ಬೆ ಕೇಳಿ ನಾನು ಸ್ಥಳಕ್ಕೆ ಹೋಗಿರುತ್ತೇನೆ. ನಾನು ಹೇಳಿದಂತೆ ಆ ದಿನ ಯಾವುದೇ ಘಟನೆ ಆಗಿಲ್ಲ ಎಂದರೆ ಸರಿಯಲ್ಲ. ನನಗೆ ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ **2** ನೇ ವಾದಿ ಹೇಳಿಕೊಟ್ಟಂತೆ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳಿಗೆ ಪಶ್ಚಿಮ ದಿಕ್ಕಿನಲ್ಲಿ ಯಾವುದೇ ಖುಮ್ಕಿ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ಶ್ರೀ ಎ.ಎನ್.ವಕೀಲರಿಂದಃಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**(ಸಾ.ಓ.ಹೇ.ಕೇ.ಸ.ಇ.ಎ.ಒ)**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಬೆಳ್ತಂಗಡಿ